ಸಿ.ಸಿ 19/2024

ಪಿ.ಡಬ್ಲ್ಯೂ-1.

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 07-12-2024.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್ ಎಂ ಎಂ., ವಕೀಲರಿಂದಃ**

ನಿಪಿ1 ರ ಮೇಲೆ ಕಾಣಿಸುವ ಸಹಿ ಮತ್ತು ಆರೋಪಿ ಪರ ವಕೀಲರು ದಾಖಲಿಸಿದ ವಕಲಾತ್ತಿನಲ್ಲಿ ಕಾಣಿಸುವ ಆರೋಪಿಯ ಸಹಿ ಒಂದೇ ಆಗಿರುತ್ತದೆ ಎಂದರೆ ಸರಿ. ನಿಪಿ5 ರಲ್ಲಿ ಕಾಣಿಸುವ ಸಹಿ ಆರೋಪಿಯದ್ದಾಗಿರುವುದಿಲ್ಲ, ಕಾವ್ಯ ಎನ್ನುವವರದ್ದಾಗಿರುತ್ತದೆ ಎಂದರೆ ಸರಿ. ನಿಪಿ5 ರಲ್ಲಿ ಕಾಣಿಸುವ ಸಹಿ ಕಾವ್ಯ ಬಮ್ಮಿಗಟ್ಟಿ ಎನ್ನುವವರದ್ದಾಗಿದ್ದು, ಅವರು ಆರೋಪಿಯ ಹೆಂಡತಿಯಾಗಿರುತ್ತಾರೆ ಎಂದರೆ ಇರಬಹುದು. ನಿಪಿ5 ರಲ್ಲಿ ಕಾಣಿಸುವ ಸಹಿ ಆರೋಪಿಯದ್ದೋ ಅಥವಾ ಆರೋಪಿಯ ಹೆಂಡತಿಯದ್ದೋ ಎಂದು ನ್ಯಾಯಾಲಯದ ಅವಗಾಹನೆಗೆ ತರಲು ಸಂಬಂಧಪಟ್ಟ ಅಂಚೆ ಇಲಾಖೆಯ ಸಿಬ್ಬಂದಿಯನ್ನು ಕರೆಯಿಸಿ ಚೌಕಾಸಿ ಮಾಡಲು ನನಗೇನೂ ತೊಂದರೆ ಇಲ್ಲ ಎಂದರೆ ಸರಿ. ಆರೋಪಿ ನನಗೆ ಯಾವ ದುಡ್ಡು ಕೊಡುವುದು ಬಾಕಿ ಇರುವುದಿಲ್ಲ, ಅವನಿಗೆ ಸಂಬಂಧಿಸಿದ ಚೆಕ್ಕನ್ನು ನಾನೇ ತುಂಬಿಕೊಂಡು ಅವನ ವಿರುದ್ಧ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ5 ರಲ್ಲಿ ಕಾಣಿಸುವ ಸಹಿ ಆರೋಪಿಯ ಹೆಂಡತಿಯದ್ದಾಗಿರುತ್ತದೆ, ಆರೋಪಿಯದ್ದಾಗಿರುವುದಿಲ್ಲ ಎಂದರೆ ಇರಬಹುದು ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ.

**-Sd-**

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,

ಮುಂಡಗೋಡ.